**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಯವರ ನ್ಯಾಯಾಲಯ, ಕುಂದಾಪುರ**

**ಎಂ.ಸಿ. ನಂಬ್ರಃ 639/2016**

**ಪ್ರಾಸಾಃ 1**

**ದಿನಾಂಕಃ 15-12-2021**

| | | |
|---|---|---|
| **ವಾಗ್ಮೂಲದವರ ಹೆಸರು** | **ಃ** | **ಮೈಮೂನ** |
| **ಗಂಡನ ಹೆಸರು** | **ಃ** | **ಅಬ್ದುಲ್ ಹಮೀದ್** |
| **ವಯಸ್ಸು** | **ಃ** | **45 ವರ್ಷ** |
| **ಉದ್ಯೋಗ** | **ಃ** | **ಗೃಹಿಣಿ** |
| **ವಾಸ ಸ್ಥಳ** | **ಃ** | **ಮೂಡುಗೋಪಾಡಿ** |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ಪಿರ್ಯಾದುದಾರರ ಪರ ವಕೀಲರಾದ ಶ್ರೀ ಆರ್ ಕೆ ಎಂ ರವರಿಂದ**

ಈ ಪ್ರಕರಣದಲ್ಲಿ ನಾನು ಅರ್ಜಿದಾರಳಾಗಿರುತ್ತೇನೆ. ಎದುರುದಾರರು ನನ್ನ ಗಂಡ. ನನಗೆ ಮತ್ತು ಎದುರುದಾರರಿಗೆ 2 ನೇ ಅರ್ಜಿದಾರಳು ದಿಃ 01-08-1998 ರಂದು ಜನಿಸಿರುತ್ತಾಳೆ. ನನ್ನ ಮತ್ತು ಎದುರುದಾರರ ಮದುವೆಯು ದಿಃ 13-06-1993 ರಂದು ಮೂಡುಗೋಪಾಡಿಯ ಮಸೀದಿಯಲ್ಲಿ ನಮ್ಮ ಜಾತಿ ಪದ್ಧತಿಯಂತೆ ನಡೆದಿರುತ್ತದೆ. ಮದುವೆಯಾದ ನಂತರ ನಾನು ಎದುರುದಾರರ ಮನೆಯಲ್ಲಿ ಎದುರುದಾರರ ಒಟ್ಟಿಗೆ ವಾಸವಾಗಿದ್ದೆ. ಮದುವೆಯಾದ 2 ತಿಂಗಳ ನಂತರ ಎದುರುದಾರರು ದುಬೈಗೆ ಹೋಗಿರುತ್ತಾರೆ. ಆಗಾಗ ರಜೆಯಲ್ಲಿ ಎದುರುದಾರರು ಊರಿಗೆ ಬರುತ್ತಿದ್ದರು. ಆ ರೀತಿ ಎದುರುದಾರರು ನಮ್ಮ ಮನೆಗೆ ಬಂದಾಗ ಅವರು ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಿರಲಿಲ್ಲ. ಎದುರುದಾರರು ನನ್ನ ಹೊಟ್ಟೆಗೆ ಸರಿಯಾಗಿ ಊಟ ಕೊಡುತ್ತಿರಲಿಲ್ಲ. ಎದುರುದಾರರು ನನಗೆ ತುಂಬಾ ಹಿಂಸೆ ನೀಡುತ್ತಿದ್ದರು. ಈಗ ನಾನು ಮತ್ತು ಎದುರುದಾರರು ಬೇರೆ ಬೇರೆಯಾಗಿ ವಾಸವಾಗಿದ್ದು, ಎದುರುದಾರರು ನನ್ನನ್ನು ಬಿಟ್ಟು ಹೋಗಿರುತ್ತಾರೆ. ಈಗ ನನಗೆ ಜೀವನ ನಡೆಸಲು ಕಷ್ಟಕರವಾಗಿರುತ್ತದೆ. ಎದುರುದಾರರು ದಷ್ಟಪುಷ್ಟವಾಗಿ ಆರೋಗ್ಯವಾಗಿರುತ್ತಾರೆ.

(ಮುಂದುವರೆದ ಮುಖ್ಯ ವಿಚಾರಣೆಯನ್ನು ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ. ದ. ನ್ಯಾ. ದಂ. ಕುಂದಾಪುರ